Regd No B G 155 20-1-1970

SATYAVADI Daily, MYSORE 4 ★ 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

❁ ಮಹಾಜನ್ ಕಮಿಷನ್ ಶಿಫಾರಸುಗಳು ಜಾರಿಗೆ ಬರಬೇಕು ❁

ಬರ್ಮಾ ಅಕ್ಕಿ

ನವದೆಹಲಿ— ಕೆಲವು ಪ್ರಧಾನವಾದ ಮತ್ತು ಇಂಜಿನೀರಿಂಗು ಪದಾರ್ಥಗಳನ್ನು ಕೊಟ್ಟು ಬರ್ಮಾ ಅಕ್ಕಿ ಪಡೆಯಲು ಭಾರತ ಒಪ್ಪಿದೆ.

○

ಸ್ಟ್ಯಾಚೂ ರಿಸೇರಿಗೆ

ನುದರಾಸು— ಹೊಸೂರಿನಲ್ಲಿ ಡ್ಯಾಮೇಜ್ ಆಗಿರುವ ಅಣ್ಣಾದೊರೆ ಸ್ಟ್ಯಾಚು ರಿಪೇರಿಗೆ ಸ್ವತಂತ್ರ ಪಕ್ಷದ ನಾಯಕರಾದ ಶ್ರೀ ರಾಜಾಜಿ ಮತ್ತು ಶ್ರೀ ರಂಗಾರವರು ಜಂಟಿಯಾಗಿ ರೂ 200 ಕೊಟ್ಟಿದಾರೆ.

○

ಟಿಬೆಟ್ ನಿರಾಶ್ರಿತರು

ಖಟ್ಮಂಡು— 10 ವರ್ಷಗಳ ಹಿಂದೆ ಚೀನಾ ಟಿಬೆಟ್ಟನ್ನು ಆಕ್ರಮಿಸಿದಾರಭ್ಯ 2000 ಟಿಬೆಟ್ ನಿರಾಶ್ರಿತರು ಭಾರತಕ್ಕೆ ಹೋಗಿರುವರೆಂದು ನೇಪಾಳದ ರೆಡ್ ಕ್ರಾಸ್ ತಿಳಿಸಿದೆ.

★

ರಷ್ಯಾ – ಚೀನಾ

ಹಾಂಕಾಂಗ್— ಕಾಂಟ್ರ್ಯಾಕ್ಟ್ ಪಂಥ್ಯಾನಿಂದ ಬಂದವರು ರಷ್ಯಾದೇಶದೊಡನೆ ಚೀನಾದ ಯುದ್ಧವು ಅನಿವಾರ್ಯವೆಂದು ಹೇಳುತ್ತಿರುವರು.

○

ಸರಕಾರವನ್ನು ಒತ್ತಾಯ

ಬಿಜಾಪುರ— ಸರಕಾರವು ರೂ 80 ಲಕ್ಷದ 500 ಹಾಸಿಗೆಗಳ ಆಸ್ಪತ್ರೆಗೆ ಆಡಳಿತ ಮಂಜೂರಾತಿಗಾಗಿ ಆಸ್ಪತ್ರೆ ವಿಜಟರ್ಸ್ ಬೋರ್ಡು ಒತ್ತಾಯ ಮಾಡಿದೆ.

ಇತರ ಹೇಳಿಕೆ

ಅಮೃತಸರ— ತಾವು ಕೈಗೊಳ್ಳುವ ಉಪವಾಸ ಮತ್ತು ಸ್ವಾಣಾರ್ಪಣೆಯು ಸ್ವಯಂ ವಿಧಿಸಿಕೊಂಡದ್ದಾಗಿದ್ದು, ಪಾಯಶ್ಚಿತ್ತ ರೂಪನಾಗಿದ್ದು, ಅದು ಬೆದರಿಕೆಗಾಗಲಿ ಒತ್ತಾಯಕ್ಕಾಗಲೀ ಅಲ್ಲವೆಂದು ಸಂತ್ ಫತೇಸಿಂಗರು ಹೇಳಿದರು.

●

ರಾಷ್ಟ್ರೀಕರಣ

ಕಾಸಿಕೋಡು—ಎಣ್ಣೇ ಕೈಗಾರಿಕೆಯು ರಾಷ್ಟ್ರೀಕರಣವಾಗಬೇಕೆಂದು ಪಾರ್ಲಿಮೆಂಟು ಸದಸ್ಯೆ ತಾರಕೇಶ್ವರಿ ಸಿನ್ಹಾರು ಮತ್ತೆ ಒತ್ತಾಯ ಕೇಳಿಕೆ ಮಾಡಿದರು.

★

ಆಸ್ತಿ ಮೇಲಿನ ಹಕ್ಕು

ನವದೆಹಲಿ– ಆಸ್ತಿ ಮೇಲಿನ ಹಕ್ಕನ್ನು ವಜಾಮಾಡುವುದು ಬಡವರಿಗೆ ತೊಂದರೆಯಾಗುವುದಿಲ್ಲವೆಂದೂ, ಚಿಕ್ಕ ವ್ಯವಸಾಯಗಾರರ ಮತ್ತು ಆಶಕ್ತ ಜನರ ಆಸ್ತಿ ಹಕ್ಕನ್ನು ತೆಗೆದುಹಾಕುವುದು ಪಾರ್ಟಿಯ ಇಚ್ಛೆಯಲ್ಲವೆಂದೂ ಹೊಸ ಕಾಂಗ್ರೆಸ್ಸು ತಿಳಿಸಿದೆ.

★

ದುರದೃಷ್ಟ ಯುವಕ

ನಾಗಪುರ— ಕಳ್ಳತನಕ್ಕೆ ಜೈಲುವಾಸ ಅನುಭವಿಸಿ ಬಂದ ಒಬ್ಬ ಯುವಕನನ್ನು ಮನೆಯವರು ತಮಗೆ ಅಗೌರವನಾಯಿತೆಂದು ಆತನನ್ನು ತ್ಯಜಿಸಿದರು – ಇದರಿಂದ ನೊಂದ ಯುವಕನು ಊರಿನ ಒಂದು ಕಡೆ ಮೈಗೆ ಬೆಂಕಿ ಹತ್ತಿಸಿಕೊಂಡನು – ದಾರಿಯಲ್ಲಿ ಹೋಗುತ್ತಿದ್ದವರು ಅವನನ್ನು ಆಸ್ಪತ್ರೆಗೆ ಸಾಗಿಸಿದರು – ಗುಣಮುಖವಾಗುತ್ತಿರುವನು.

ಸಭಾ ಪರಿತ್ಯಾಗ

ತ್ರಿವೇಂದ್ರಂ— ತಾಯ್‌ಕಟುಸರಿಯಲ್ಲಿ ಶನಿವಾರ ಮಾಜಿ ಮಾರ್ಕ್ಯಿಸ್ಟು ಸಚಿವೆ ಗೌರಿಯವರ ಕಾರನ್ನು ಎದುರಿಸಿದ ಜನರನ್ನು ಪೋಲೀಸರು ತಡೆಗಟ್ಟಿದ್ದುದನ್ನು ಪ್ರತಿಭಟಿಸಿ, ನಿನ್ನೆ ಶಾಸನಸಭೆಯಲ್ಲಿ ಮಾರ್ಕ್ಯಿಸ್ಟರು ಸಭಾಪರಿತ್ಯಾಗ ಮಾಡಿದರು.

★

ಪರ್ಯಾಯ ಮಹೋತ್ಸವ

ಭಾನುವಾರ ಉಡುಪಿಯ ಶ್ರೀ ಕೃಷ್ಣ ದೇವಾಲಯದ ರಜತಗರ್ಭನಲ್ಲಿ ಪರ್ಯಾಯ ಮಹೋತ್ಸವವು ವೈಭವವಾಗಿ ನೆರವೇರಿತು. ಶ್ರೀ ಕೃಷ್ಣನ ಪೂಜೆಯನ್ನು ಪೇಜಾವರ ಮಠದ ಸ್ವಾಮಿಗಳು ಫಲಿಮಾರು ಮಠದ ಸ್ವಾಮಿಗಳಿಗೆ ವಹಿಸಿದರು. ಆಡಂಬರದ ಮೆರವಣಿಗೆಯಲ್ಲಿ ಫಲಿಮಾರು ಮಠದ ದೇವರು ಶ್ರೀ ರಾಮಚಂದ್ರ ಮೂರ್ತಿಯನ್ನು ಸುಂದರವಾಗಿ ಅಲಂಕರಿಸಲ್ಪಟ್ಟಿದ್ದ ಭಂಗಾರದ ಪಲ್ಲಕ್ಕಿಯಲ್ಲಿ ಇಡಲಾಗಿತ್ತು. ರಾಜ್ಯ ಸರಕಾರದ ಪರ ಹೊಸ ಸ್ವಾಮಿಗಳವರಿಗೆ ತುಳಸೀಮಾಲೆ ಆರ್ಪಿಸಲಾಯಿತು. ಅನೇಕ ಸಂಘ ಸಂಸ್ಥೆಗಳ ಪರ ಹಾರ ಆರ್ಪಿಸಲಾಯಿತು. ಪಟ್ಟ ಕಾಣಿಕೆಯಾಗಿ ರೂ. 20000 ನಮರ್ಪಿಸಲಾಯಿತು.

○

ರೈಲಿಗೆ ಕಲ್ಲು ಹೊಡೆತ

ಕೃಷ್ಣಗಿರಿ— ಜಲಹಳ್ಳಿ ಹತ್ತಿರ ಕಲ್ಲುತ್ತಾಕ್ಕೆ ಹೋಗುತ್ತಿದ್ದ ರೈಲಿಗೆ ಪ್ರದರ್ಶನ ಕಾರರು ಕಲ್ಲು ಬೀರಿದ್ದರ ಪರಿಣಾಮವಾಗಿ 12 ಮಂದಿ ಗಾಯಗೊಂಡರು.

★

ಗೌರ್ನರ್‌ರವರ ಭಾಷಣ

ಬೆಂಗಳೂರು— ನಿನ್ನೆ ಪ್ರಾರಂಭವಾದ ಶಾಸನ ಸಭೆಗಳ ಬಜೆಟ್ ಅಧಿವೇಶನದ ಪ್ರಾರಂಭದಲ್ಲಿ ಗೌರ್ನರ್ ಶ್ರೀ ಧರ್ಮವೀರರವರು ಮಾಡಿದ ಭಾಷಣದಲ್ಲಿ– ರಾಜ್ಯ ಸರಕಾರಕ್ಕೂ, ರಾಜ್ಯದ ಜನತೆಗೂ ಮಹಾಜನ ಕಮಿಷನ್ ಶಿಫಾರಸ್ಸನ್ನು ಜಾರಿಗೆ ತರದಿರುವುದು ಚಿಂತೆಯೆಂಟು ಮಾಡಿರುವುದೆಂದೂ, ಇದನ್ನು ಇನ್ನು ಕಾವಿಳಂಬವಾಗದಂತೆ ಜಾರಿಗೆ ತರಬೇಕೆಂದೂ ಹೇಳಿದರು – ಗೌರ್ನರರ ಭಾಷಣವು ರಾಜ್ಯದ ವಿವಿಧ ರೀತಿಯ ಅಭಿವೃದ್ಧಿ ವಿಷಯಗಳನ್ನೊಳಗೊಂಡಿದೆ.

○

ಬಹಿರಂಗ ಸಭೆಯಲ್ಲಿ ಕಲ್ಲು ಜೋಡು ಎಸೆತ

ರಾಜಮಹೇಂದ್ರಿ— ಇಲ್ಲಿ ನಿನ್ನೆ ಏರ್ಪಡಿಸಲಾಗಿದ್ದ 20000 ಜನರ ಭಾರಿ ಬಹಿರಂಗಸಭೆಯಲ್ಲಿ, ಮಾಜಿ ಲೋಕಸಭಾ ಸ್ಪೀಕರ್ ನೀಲಂ ಸಂಜೀವಯ್ಯನವರು ಎದ್ದಾಗ ತಯಸ್ ಕಡೆಗೆ ಜೋಡುಗಳನ್ನೂ ಕಲ್ಲುಗಳನ್ನೂ ಎಸೆಯಲಾಯಿತು – ಸಂಜೀವ ರೆಡ್ಡಿ, ಅಮ್ಮಣ್ಣ ರಾಜ ಮತ್ತಿತರ ಕೆಲವರು ಹಳೇ ಕಾಂಗ್ರೆಸಿಗರಿಗೆ ಕಲ್ಲಿನೇಟು ಬಿದ್ದಿತೆಂದು ಹೇಳಲಾಗಿದೆ – 'ನೀವು ಮಾರವಾಡಿಗಳಿಗೆ ಕಾಗದದ ಕಾರ್ಖಾನೆ ಮಾರಿದಿರಿ' ಎಂದು ರೆಡ್ಡಿಯವರನ್ನು ಕುರಿತು ಕೂಗಿಕೊಳ್ಳಲಾಯಿತು.

★

ಫುಟಗ ಮೈಸೂರಿನವ

ಕಟಕ್— ರಾಷ್ಟ್ರೀಯ ಕ್ರೀಡೆಗಳಲ್ಲಿ 1500 ಮಾಟರು ಓಡುವ ಜೂ ಜಿನಲ್ಲಿ ಮೈಸೂರಿನ ಸ್ಟಾಕಿ ಆರ್ ಎಸ್ ಪಾಂಡೆ ವಿಜಯಗೊಂಡರು.

"Bank Road Bahusar – A Fair Price Shop in Actual Practice"

10 ಪೈಸೆ ಕೊಡದಿದ್ದಕ್ಕೆ ಕತ್ತು ಹಿಸಿಕಿ ಸಾಯಿಸಿದರು

24 ಪರಗಣದ ಕಮಾರ ಹಟ್ಟಿಯಲ್ಲಿ ಈಚೆಗೆ ನಡೆದದ್ದು. ಅಲ್ಲಿ ಏರ್ಪಡಿಸ ಲಾಗಿದ್ದ ಒಂದು ಸಂಗೀತ ಸಮಾರಂಭಕ್ಕೆ ವ್ಯವಸ್ಥಾಪಕರು ಒಬ್ಬ 40 ವರ್ಷದ ವಿಕ್ಷಾ ಕನಿಯುವನನ್ನು 10 ಪೈಸೆ ಚಂದಾ ಕೇಳಿದರು. ಆತನು ಇನ್ನೂ ಏನೂ ಸಂಪಾದನೆ ಮಾಡಿಲ್ಲವೆಂದೂ, ಕೊಡಲು ತನ್ನಲ್ಲಿ ಏನೂ ಇಲ್ಲವೆಂದೂ ಹೇಳಲು, ಜಗಳ ಹುಟ್ಟಿ ಕೊಂಡು ತಂಡದವರು ಆತನು ಕತ್ತಿಗೆ ಹಾಕಿಕೊಂಡಿದ್ದ ಮಫ್ಲರನ್ನು ಬಿಗಿದು ಕುತ್ತಿಗೆ ಹಿಸಿಕಿ, ಮೈಗೆಲ್ಲಾ ಹೊಡೆದರು. ಆತನು ಸಹಾಯಕ್ಕಾಗಿ ಕೂಗಿಕೊಳ್ಳಲು, ರಸ್ತೆ ಯಲ್ಲಿ ಹೋಗುತ್ತಿದ್ದವರು ಪ್ರತಿಭಟಿಸಲು,ಆತನನ್ನು ಬಿಟ್ಟುಬಿಟ್ಟರು. ಆತನು ಸ್ವಲ್ಪ ಮುಂದೆ ಹೋಗಿ, ತನ್ನ ಸಹೋದರಿಯ ಮನೆ ಮುಂದೆ ಬಿದ್ದು ಸತ್ತನು. ಈ ಸಂಬಂಧದಲ್ಲಿ ಪೋಲೀಸರು ಇಬ್ಬರನ್ನು ಬಂಧಿಸಿರುವರು.

ಮನನಾರ್ಹ ವಿಷಯ

ಮನುಷ್ಯನು ಬಯಸುವ ಉಭಯ ಲೋಕಗಳ ಮೇಲುಗಳೂ ಅವನಿಗೆ ಜ್ಞಾನ ದಿಂದಲೇ ಉಂಟಾಗಬೇಕಾಗಿದೆ. ಆವಕಾರಣ ಅವನು ವಿಧೇಯತೆಯಿಂದಲೂ ಪೂರ್ಣಾಸಕ್ತಿಯಿಂದಲೂ ಜ್ಞಾನ ಸಂಪಾದನೆ ಮಾಡುವುದು ಸರ್ವ ಕರ್ತವ್ಯಗಳಲ್ಲೂ ಮೊದಲನೆಯದಾಗಿದೆ.

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ

ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಆದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆಯವೆಚ್ಚ ಸೇರಿ ವರ್ಷಕ್ಕೆ ರೂ 10-0)

ಸೋಮವಾರ ಸಂಚಿಕೆ ವರ್ಷಕ್ಕೆ ರೂ 2

ಗೋರಕ್ಷಣಕ್ಕೆ ಚಂದಾ ಮತ್ತು ಡೊನೇರ್ಷ ಪಾವತಿಮಾಡುವ ಅಡ್ರೆಸ್

1 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ ಹೊಂಗನೂರು, ಚಾಮರಾಜನಗರ ತಾಲ್ಲೂ

2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಟ್ರಾಲಜರ್, 180 ನ್ಯೂ ಬ್ಲಾಕ್, ವಿದ್ಯಾರಣ್ಯಪುರಂ, ಮೈಸೂರು.

3. ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್, ಪ್ರಾಣಿದಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು

4 ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು

S H A K T I

S U D H A

A Superb Tonic

ದೇಶದ ಹಿತಕಾಗಿ

ಕುಟುಂಬ ಯೋಜನೆ

ಅಖಿಲ ಭಾರತದಲ್ಲಿ ಕೂಡಲೇ

ಗೋವಧೆ ನಿಷೇಧವಾಗಲಿ

ವುಡ್‌ಲ್ಯಾಂಡ್ ಅಮೋಘ 3 ನೇ ವಾರ

ಶಿನ್ ಅಮೋಘ ಪ್ರಾರಂಭ

ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆಪೂಜೆ

ನಟವರ್ಗ– ಕಲ್ಪನ, ಅಶ್ವತ್, ಬಾಲಕೃಷ್ಣ, ಪಂಡರಿಬಾಯಿ

ನಿರ್ದೇಶನ : ಪುಟ್ಟಣ್ಣ ಕಣಗಾಲ್ ಸಂಗೀತ : ವಿಜಯ ಭಾಸ್ಕರ್

[ದಿನ 3 ಪ್ರದರ್ಶನಗಳು]

ಆಪೆರಾ— ಅಮೋಘ 4ನೇ ವಾರ

.... ಅತ್ಯಮೋಘ ಹಿಂದಿ ಚಿತ್ರ ....

ನನ್ನ ಘರಿಷ್ಟೆ

ನಿರ್ದೇಶನ ಟಿ. ಪ್ರಕಾಶರಾವ್ ಸಂಗೀತ ಕಲ್ಯಾಣಜಿ ಆನಂದಜಿ (ಕಲರ್)

ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣಕ್ಕೆ ಬೆಂಬಲ ನೀಡಿ

Protect the Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4